ಬಯೋಡಾಟಾ ಕಳಿಸತೊಡಗಿದ.

ಅಮರೇಶ ಅವತ್ತು ಊಟದ ಸಮಯದಲ್ಲಿ ‘ಬ್ಯಾಂಕಿಂದ ದುಡ್ಡು ತರೋದು, ಸಾಮಾನು ದೇಖರೇಖಿ ನೋಡೋದು, ಮತ್ತಿತರ ಖಾಸಾ ಕೆಲಸಕ್ಕೆ ನಂಬಿಗೆಯವರೊಬ್ಬರು ನಮ್ಮ ಉದ್ಯಮಕ್ಕೇ ಬೇಕು. ನಮ್ಮ ಹುಡುಗ ತೊರದ, ಯಾರ್‍ಯಾರನ್ನೋ ನೇಮಿಸಿಗೊಳೋ ಬದಲು ಇವನೇ ಆ ಕೆಲಸ ಮಾಡಲಿ...’ ಅಂದ.

ಸುಗುಣಾ ಸಂತೋಷದಲ್ಲಿ ‘ಪಾಲುದಾರನಾಗಿ ಮಾಡಕೋತಿಯೇನೋ!’ ಎಂದು ಕೇಳಿದಳು. ‘ಪಾಲು ಗೀಲು ಅನ್ನೋ ಮಾತು ಈಗ್ಯಾಕಮ್ಮ? ಮನೆಹುಡುಗ, ಮದುವೆ ಮತ್ತೊಂದು ಆದಾಗ ನೋಡೋಣ. ಇಷ್ಟು ಸಂಬಳ ಅಂತ ಮಾಡಿದ್ರೂ ಆಯ್ತು...’ ಅಂದ.

ಸಂಜೆ ಮಾಳಿಗೆಮೇಲೆ ಇಬ್ಬರೇ ಇದ್ದರು. ‘ನೀನು ಹುಬ್ಬಳ್ಳಿ ಫ್ಯಾಕ್ಟರೀ ಕೆಮಿಸ್ಟ್ ಕೆಲಸಕ್ಕೆ ಬೇಗ ಸೇರಿಕೊಳ್ಳೋದು ಒಳ್ಳೇದು’ ಅಂದಳು ಮಂದಾ.

ತೊರದ ಅರ್ಥವಾಗದೆ ಅವಳತ್ತ ನೋಡಿದ. ‘ಅಲ್ಲಿಂದ ಸಿವಿಲ್ ಸರ್ವೀಸು, ಬ್ಯಾಂಕ್ ಆಫೀಸರ್ ಪರೀಕ್ಷೆ ಬರಿ. ಸಂಬಂಧ, ಔದಾರ್ಯ, ಋಣ ಇವೆಲ್ಲ ನೆರಳೂ ಹೌದು, ಉರುಳೂ ಹೌದು. ಗುರಿ ಮುಟ್ಟಬೇಕಾದ್ರೆ ಸಂಬಂಧದ ಹೆಸರಿನ ಸಂಕೋಲೆ, ಯಾರು ಏನಂದ್ಕೋತಾರೊ ಅನ್ನೋ ಹೆದರಿಕೆ ಬಿಡಬೇಕಾಗತ್ತೆ. ಹಾರಲೇಬೇಕಿದ್ರೆ ನದೀಲಿ ಹಾರಬೇಕು; ಸಮುದ್ರದ ತನಕ ಅವಕಾಶ ಇರತ್ತೆ. ಊರೆದುರಿನ ಹೊಂಡ ಎಲ್ಲೂ ಮುಟ್ಟಿಸಲ್ಲ’ ಎಂದಳು. ಅವಾಕ್ಕಾಗಿ ಅವಳತ್ತ ನೋಡಿದ. ತೀರ್ಪು ಕೊಡುವಂತೆ ಅವನನ್ನೇ ನೋಡುತ್ತ ಅವಳು ನಿಂತಿದ್ದಳು.

ಸೆಳೆಯಲ್ಪಟ್ಟಂತೆ ಕಾಲುಗಳು ಅವಳತ್ತ ಚಲಿಸಿದುವು. ಅವಳ ಎರಡೂ ಭುಜಗಳಮೇಲೆ ಕೈಯಿರಿಸಿ ಅವಳ ಕಣ್ಣುಗಳಲ್ಲಿ ನೋಡಿದ. ‘ನಾನು ಹೇಳಿದ್ದು ಅರ್ಥ ಆಯ್ತಾ?’ ಕೇಳಿದಳು ತಗ್ಗಿದ ದನಿಯಲ್ಲಿ. ಬೊಗಸೆಯಲ್ಲಿ ಅವಳ ಮುಖವನ್ನು ತೆಗೆದುಕೊಂಡವ ತುಟಿಗೆ ತುಟಿಯಿಟ್ಟ. ದೀರ್ಘವಾಗಿ ಮುತ್ತಿಟ್ಟು ಕೈ ತೆಗೆದುಕೊಂಡ. ‘ಧೀರ ಹುಡುಗ’ ಅಂದಳು ಪಿಸುದನಿಯಲ್ಲಿ.

ಅಡುಗೆ ಕೋಣೆಯಲ್ಲಿ ಇಬ್ಬರೇ ಇದ್ದರು. ‘ನೀನೀಗ ಮತ್ತೇನು ಮಾಡತಿದೀಯೆ ಲ್ಯಾಪ್‌ಟಾಪಲ್ಲಿ?’ ಎಂದು ಕೇಳಿದ ಸುಗುಣಾಳಿಗೆ ಮಂದಾಳ ಉತ್ತರದಿಂದ ಅಚ್ಚರಿಯಾಗಿ, ‘ಕೆಲಸ ಹಿಡಿಯೋದೆಲ್ಲ ನಿಂಗ್ಯಾಕೇ? ವರ್ಷ ಎರಡುವರ್ಷ ಬಿಟ್ಟು ಒಳ್ಳೇಕಡೆ ಮದುವೆ ಮಾಡತೀವಿ’ ಅಂದಳು.

‘ಅಮ್ಮ, ಸ್ವಾವಲಂಬಿಯಾಗೋದರಲ್ಲಿ ತಪ್ಪೇನಿದೆ? ಮತ್ತೊಂದು ಮಾತು, ಮದುವೆಗೆ ಹುಡುಕೋದೆಲ್ಲ ಬೇಡ. ನಾನು ತೊರದನ್ನ ಮೆಚ್ಚಿಕೊಂಡಿದೀನಿ’.

ಸುಗುಣಾಳಿಗೆ ದಿಗ್ಭ್ರಮೆಯಾಯಿತು! ಇದು ಮನೆಯವರ್‍ಯಾರೂ ಊಹಿಸಲಸಾಧ್ಯವಾದುದಾಗಿತ್ತು. ಗಂಡ ಇದಕ್ಕೆ ಒಪ್ಪಲು ಸಾಧ್ಯವೇ ಇಲ್ಲ ಅನ್ನುವುದಲ್ಲದೆ ಸುಗುಣಾಳದೇ ಕೆಲ ಕಾರಣಗಳಿದ್ದವು. ‘ತೊರದನಿಗಿಂತ ನೀನು ಆರು ತಿಂಗಳಕ್ಕೆ ದೊಡ್ಡವಳು, ಗೊತ್ತಲ್ಲ?’ ಆಕ್ಷೇಪಿಸಿದಳು. ‘ದೊಡ್ಡವಳಿರಬಾರದು ಅಂತ ಯಾವ ಕಾನೂನಲ್ಲು ಇಲ್ಲ. ಪ್ರತಿಭಾವಂತರು, ಹೆಸರು ಮಾಡಿದವರೆ ಎಷ್ಟು ಜೋಡಿಗಳಲ್ಲಿ ಹೆಣ್ಣು ಹಿರಿಯ ವಯಸಿನವಳಿಲ್ಲ! ಅಂಕೆಸಂಖ್ಯೆ ಕೊಡಲಾ?’

‘ಅದಲ್ಲ ಮಂದಾ, ತೊರದನ್ನ ನಂಗೆ ಕೊಟ್ಟಿದಾರೆ, ನಿಂಗೆ ನಾನು ತಾಯಿ...’

‘ಅವನ್ನ ನೀವೇನು ಶಾಸ್ತ್ರ ಪ್ರಕಾರ ಮಗ ಅಂತ ಪಡೆದಿದೀರ? ಇಲ್ಲ! ಹೋಗಲಿ ಅಂದ್ರೆ ಕಾನೂನು ಪ್ರಕಾರಾನು ದತ್ತು ಪಡೆದಿಲ್ಲ. ಅವನಿಲ್ಲಿ ಇದಾನೆ ಅಷ್ಟೆ...’

‘ಅಲ್ವೇ... ತೊರದ ಹತ್ತುದಿನದ ಶಿಶುವಾಗಿದ್ದ. ನಿಂಗೆ ಕುಡಿಸಿದ ಮೊಲೇನೆ ಅವನಿಗು ಕುಡಿಸಿದೀನಿ...’

‘ಅಮ್ಮಾ, ಜಗತ್ತಿನಲ್ಲಿ ಎಷ್ಟೋ ತಾಯಂದಿರಿಗೆ ಯಾವುದೋ ಕಾರಣಕ್ಕೆ ಹಾಲಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಹಾಲಿದ್ದವರು ದುಡ್ಡಿಗೋ ಅಥವಾ ಮಾನವೀಯತೆಯ ನೆಲೆಯಲ್ಲೋ ಅಂಥ ಮಕ್ಕಳಿಗೆ ಹಾಲು ಕುಡಿಸುವುದು ನಿಂಗೆ ಗೊತ್ತಿಲ್ಲದ್ದೇನಲ್ಲ. ಹೋಗಲಿ, ಈಗೀಗ ಮೊಲೆಹಾಲಿನ ಬ್ಯಾಂಕುಗಳೇ ಇದ್ದಾವಲ್ಲ. ಅಲ್ಲಿರುವ ಹಾಲು ಯಾರದ್ದು... ಅದನ್ನ ಯಾವ ಮಕ್ಕಳು ಕುಡೀತಾರೆ ಗೊತ್ತಿರುತ್ತಾ? ಇದನ್ನೆಲ್ಲ ಸಂಬಂಧದಲ್ಲಿ ಮಾರ್ಪಡಿಸಬೇಡ’.

ಸುಗುಣಾ ನಿರುತ್ತರಳಾದಳು. ಎರಡು ನಿಮಿಷದ ನಂತರ ಒಲೆಯಿಂದ ಹಾಲಿನ ಪಾತ್ರೆ ಇಳಿಸುತ್ತ ತನಗೇ ಎಂಬಂತೆ ಹೇಳಿದಳು, ‘ನಿನ್ನ ಹತ್ರ ಏನು ವಾದ. ತೊರದನ ಹತ್ತಿರ ಮಾತನಾಡತೀನಿ... ಅವನು ಏನು ಅಂತ ನಂಗೊತ್ತು!’

●